ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 3–08–2018

# <u>ಪತ್ರಿಕಾ ಆಮಂತ್ರಣ</u>

**1. Workshop on POCSO For Investing Officers on**
**" Strengthening the Implementation of POCSO Act-2012**
**Improving Co-Ordination Among Stake Holders"**

**Inauguration:**

**Smt. Neelmani N. Raju, IPS,**
**Director General and Inspector General of Police.**

**Venue: Conference Hall, 7th Floor, Police Headquarters**
**No. 2 Nrupathunga Road, Bengaluru-560 001**
**Date: 04-08-2018, Saturday, at 10-30 A.M.**

**2) Workshop on POCSO For Investing Officers on**
**" Strengthening the Implementation of POCSO Act-2012**
**Improving Co-Ordination Among Stake Holders"**

**Validictory:**
**Sri P.K. Garg, IPS**
**Director General of Police**
**Training and Recruitment CID.**

**Venue: Conference Hall, 7th Floor, Police Headquarters**
**No. 2 Nrupathunga Road, Bengaluru-560 001**
**Date: 04-08-2018, Saturday, at 4-30 P.M.**

3.ಕನ್ನಡ ಪುಸ್ತಕ ಪ್ರಾಧಿಕಾರ ವತಿಯಿಂದ ಮುದ್ರಣ ತಂತ್ರಜ್ಞಾನ – ಒಂದು ಅವಲೋಕನ ಕಾರ್ಯಕ್ರಮ:

**ಉದ್ಘಾಟನೆ:**

ಡಾ. ಹಂಪ ನಾಗರಾಜಯ್ಯ,
ಸಾಹಿತಿಗಳು

ಅಧ್ಯಕ್ಷತೆ:

ಡಾ ವಸುಂಧರಾ ಭೂಪತಿ,
ಅಧ್ಯಕ್ಷರು,
ಕನ್ನಡ ಪುಸ್ತಕ ಪ್ರಾಧಿಕಾರ

ದಿನಾಂಕ: 04–08–2018, ಶನಿವಾರ, ಸಮಯ : ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ ಮಹಿಳಾ ವಿಶ್ರಾಂತಿ ಕೊಠಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002.

4. COPTA-2003 ಕಾನೂನು ಅನುಷ್ಠಾನ ಕುರಿತು ಜಿಲ್ಲಾಮಟ್ಟದ ಸೆಕ್ಷನ್ –5, ಸೆಕ್ಷನ್ –7 ರ ಮೇಲ್ವಿಚಾರಣ ಸಮಿತಿ ಸಭೆ

ದಿನಾಂಕ: 4–8–2018, ಶನಿವಾರ, ಸಮಯ: ಮಧ್ಯಾಹ್ನ 12–30 ಗಂಟೆಗೆ
ಸ್ಥಳ: ಜಿಲ್ಲಾಧಿಕಾರಿಗಳ ಸಭಾಂಗಣ, ಮೊದಲನೆ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ ಬೆಂಗಳೂರು

**ಸಂಖ್ಯೆ: 771/881**

**ಪತ್ರಿಕಾ ಪ್ರಕಟಣೆ**

## ರಾಜ್ಯದ ಪ್ರತಿ ನಾಗರಿಕನಿಗೂ ಶುದ್ದ ಕುಡಿಯುವ ನೀರನ್ನು ಪೂರೈಸುವುದು ಸರ್ಕಾರಗಳ ಜವಾಬ್ದಾರಿ– ನ್ಯಾ: ಹೆಚ್.ಎಲ್. ದತ್ತು

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ರಾಜ್ಯದ ಪ್ರತಿ ನಾಗರಿಕನಿಗೂ ಶುದ್ಧ ಕುಡಿಯುವ ನೀರನ್ನು ಪೂರೈಸುವುದು ಸರ್ಕಾರಗಳ ಜವಾಬ್ದಾರಿ, ಈ ಕುರಿತು ಮಾಧ್ಯಮಗಳಲ್ಲಿ ಕಲುಷಿತ ಕುಡಿಯುವ ನೀರಿನ ಪೂರೈಕೆ ಕುರಿತು ವರದಿಗಳು ಪ್ರಕಟವಾದಲ್ಲಿ ಮಾನವ ಹಕ್ಕುಗಳ ಆಯೋಗ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಹೆಚ್.ಎಲ್ ದತ್ತು ಅವರು ತಿಳಿಸಿದರು.

ಜುಲೈ 2 ಮತ್ತು 3 ರಂದು ಬೆಂಗಳೂರಿನ ವಿಕಾಸಸೌಧಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಮ್ಮಿಕೊಂಡಿದ್ದ ಎರಡು ದಿನಗಳ ಬಹಿರಂಗ ವಿಚಾರಣೆಯ ಅಧಿವೇಶನದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕುಡಿಯುವ ನೀರು ಮನುಷ್ಯನ ಮೂಲಭೂತ ಹಕ್ಕಾಗಿದ್ದು ಕಲುಷಿತ ಅಥವಾ ಕುಡಿಯಲು ಯೋಗ್ಯವಲ್ಲದ ನೀರನ್ನು ಸರಬರಾಜು ಮಾಡುವುದರ ಬಗ್ಗೆ ಸರ್ಕಾರಗಳು ಗಂಭೀರವಾಗಿ ಪರಿಗಣಿಸುವ ಅಗತ್ಯವಿದ್ದು ತಕ್ಷಣದಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ನಕಲಿ ಮಾನವ ಹಕ್ಕುಗಳ ಸಂಘಟನೆಗಳ ಕುರಿತಂತೆ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು ಈ ಕುರಿತು ಪೋಲೀಸ್ ಇಲಾಖೆಯಲ್ಲಿ ದೂರುಗಳು ದಾಖಲಾಗಿದ್ದಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. ಆಯೋಗದ ಹೆಸರನ್ನು ದುರ್ಬಳಕೆ ಮಾಡುವವರ ವಿರುದ್ಧ ಪೋಲೀಸರಿಗೆ ದೂರು ದಾಖಲಿಸಲಾಗುವುದು ಎಂದರು.

ಕಳೆದ ಎರಡು ದಿನಗಳ ಕಾಲ ನಡೆದ ಬಹಿರಂಗ ವಿಚಾರಣೆಯಲ್ಲಿ ವಿವಿಧ ವಿಷಯಗಳ ಕುರಿತಂತೆ 185 ಕ್ಕೂ ಹೆಚ್ಚು ಪ್ರಕರಣಗಳನ್ನು ಆಲಿಸಲಾಗಿದ್ದು ಇವುಗಳಲ್ಲಿ 106 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಪ್ರತಿ ವರ್ಷ ಇದೇ ರೀತಿ ಪ್ರತಿ ರಾಜ್ಯದಲ್ಲೂ ಬಹಿರಂಗ ವಿಚಾರಣೆಯನ್ನು ಹಮ್ಮಿಕೊಂಡು ದೂರುಗಳ ಶೀಘ್ರವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಯೋಗದ ಸದಸ್ಯರಾದ ನ್ಯಾಯಮೂರ್ತಿ ಡಿ. ಮುರುಗೇಶನ್ ಹಾಗೂ ಜ್ಯೋತಿಕ ಕಾಲ್ರಾ ಅವರು ಉಪಸ್ಥಿತರಿದ್ದರು.

## ಜುಲೈ 1 ರಿಂದ ಡಿಸೆಂಬರ್ 31 ರವರೆಗೆ
## 76ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಕುಡಿಯುವ ನೀರು, ಸ್ವಚ್ಚತೆ, ಸ್ವಾಸ್ಥ್ಯ ರಕ್ಷಣೆ, ಮನೆಗಳ ಸ್ಥಿತಿ ಹಾಗೂ ಅಂಗವಿಕಲ ವ್ಯಕ್ತಿಗಳ ಕುರಿತು ಮಾಹಿತಿಯನ್ನು ಸಂಗ್ರಹಿಸಲು 2018 ರ ಡಿಸೆಂಬರ್‌ವರೆಗೆ 76ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ ನಡೆಸಲಾಗುವುದೆಂದು ರಾಷ್ಟ್ರೀಯ ಮಾದರಿ ಸಮೀಕ್ಷೆಯ ನಿರ್ದೇಶಕಿ ಡಾ. ರಾಜೇಶ್ವರಿ ಕಸ್ತೂರಿ ಅವರು ತಿಳಿಸಿದರು.

ಅವರು ಇಂದು ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾದ ಸಮೀಕ್ಷೆಯ ಕುರಿತ ಎರಡು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಸಮೀಕ್ಷೆಯ ಮುಖ್ಯ ಉದ್ದೇಶವೆಂದರೆ ಮನೆಗಳ ಸ್ಥಿತಿ ಮತ್ತು ಜೀವನ ಸೌಕರ್ಯಗಳ ಬಗ್ಗೆ ಸರ್ಕಾರಕ್ಕೆ ಹಾಗೂ ಯೋಜನಾ ಮಂಡಳಿಗಳಿಗೆ ಸಮರ್ಪಕ ಯೋಜನೆಗಳ ತಯಾರಿಗೆ ವಿಶ್ವಾಸಾರ್ಹ ಹಾಗೂ ಸಮಗ್ರ ಮಾಹಿತಿಯನ್ನು ಕಲೆಹಾಕುವುದಾಗಿದೆ.

ಸದರಿ ಸಮೀಕ್ಷೆಯಲ್ಲಿ ವಾಸಿಸಲು ಅವಶ್ಯವಿರುವ ಜೀವನ ಸೌಕರ್ಯಗಳಾದ ಕುಡಿಯುವ ನೀರು, ಸ್ನಾನದ ಮನೆ, ಶೌಚಾಲಯಗಳ ಬಳಕೆ, ವಾಸಸ್ಥಾನ ಮತ್ತು ಅದರ ಸುತ್ತಮುತ್ತಲ ಸ್ವಾಸ್ಥ್ಯ ಸ್ಥಿತಿ, ನೈರ್ಮಲ್ಯ, ಒಳಚರಂಡಿ, ಕಸ ವಿಲೇವಾರಿ, ನೊಣ ಹಾಗೂ ಸೊಳ್ಳೆಗಳ ಸಮಸ್ಯೆ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗುವುದು.

ಈಗಾಗಲೇ 29 ನೇ ಸುತ್ತಿನಲ್ಲಿ ಅಂದರೆ 2011-12 ರಲ್ಲಿ ಈ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಸ್ವಚ್ಛ ಭಾರತ ಅಭಿಯಾನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಕಳೆದ 6 ವರ್ಷಗಳಲ್ಲಿ ಜೀವನ ಮಟ್ಟದ ಸುಧಾರಣೆಗಳ ಬಗ್ಗೆ ತಿಳಿಯುವ ಉದ್ದೇಶ ಈ ಸಮೀಕ್ಷೆಯದ್ದಾಗಿದೆ.

ಸಮೀಕ್ಷೆಯ ಮುಖ್ಯ ಉದ್ದೇಶವು ಅಂಗವಿಕಲತೆಯ ಘಟನೆ, ಲಕ್ಷಣ, ಪ್ರಾಮುಖ್ಯತೆ, ಅಂಗವಿಕಲತೆಯ ಪ್ರಮಾಣ ಅವರಿಗೆ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಸೂಚ್ಯಾಂಕಗಳನ್ನು ಅಂದಾಜಿಸಲು ಸಹ ಮಾಹಿತಿ ಸಂಗ್ರಹಿಸಲಾಗುತ್ತದೆ.

ಈ ಮಾಹಿತಿಯ ಎಲ್ಲಾ ಜಿಲ್ಲೆಗಳಲ್ಲಿ ಇಲಾಖೆಯ ಮಾಹಿತಿ ಸಂಗ್ರಾಹಕರು ಸಂಗ್ರಹಿಸಲಿದ್ದಾರೆ. ರಾಜ್ಯ ಹಾಗೂ ಕೇಂದ್ರ ಸರ್ಕಾರ ಸಮನ್ವಯದಿಂದ ಸಮೀಕ್ಷೆ ನಡೆಸಲಾಗುವುದು. 2012 ರ ಸಮೀಕ್ಷೆಯ ಆಧಾರದಂತೆ ಗ್ರಾಮೀಣ ಪ್ರದೇಶದ ಶೇ 59.4 ಕುಟುಂಬಗಳಲ್ಲಿ ಹಾಗೂ ನಗರ ಪ್ರದೇಶದ ಶೇ 8.8 ರಷ್ಟು ಕುಟುಂಗಳಲ್ಲಿ ಶೌಚಾಲಯ ವ್ಯವಸ್ಥೆ ಇರುವುದಿಲ್ಲ. ಗ್ರಾಮೀಣ ಭಾಗದ ಶೇ 80 ಹಾಗೂ ನಗರ ಪ್ರದೇಶದ 97.7 ರಷ್ಟು

ಕುಟುಂಬಗಳಲ್ಲಿ ಮಾತ್ರ ವಿದ್ಯುಚ್ಛಕ್ತಿ ಇರುತ್ತದೆ. ಹೀಗೆ ಸಮೀಕ್ಷೆಗಳಲ್ಲಿ ಹಲವು ಅಂಶ ಬಯಲುಗೊಳ್ಳುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜನನ ಮತ್ತು ಮರಣದ ಮುಖ್ಯ ರಿಜಿಸ್ಟಾರ್ ಎಸ್. ನಾರಾಯಣ್, ಈ ಸಮೀಕ್ಷೆ ಬಹಳ ಅವಶ್ಯಕವಾಗಿದ್ದು, ಇದರಿಂದ ಉಪಯುಕ್ತ ಮಾಹಿತಿಗಳು ಸಂಗ್ರಹವಾಗಲಿದೆ. ಸಮೀಕ್ಷೆದಾರರು ಮನೆಯಿಂದ ಮನೆಗೆ ತೆರಳಿ ಸಾಮಾಜಿಕ ಸ್ಥಿತಿಯ ಬಗ್ಗೆ ಸಮೀಕ್ಷೆ ನಡೆಸುತ್ತಾರೆ. ಇದರಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ ಮುಖ್ಯ ಎಂದರು.

ಕಾರ್ಯಾಗಾರದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯ ಜಂಟಿ ನಿರ್ದೇಶಕರಾದ ಎಸ್.ಒ ನಾರಾಯಣಪ್ಪ, ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿಯ ಸಾಂಖ್ಯಿಕ ಹಾಗೂ ಕಾರ್ಯಕ್ರಮ ಅನುಷ್ಠಾನದ ನಿರ್ದೇಶಕರಾದ ಎಸ್. ಲೀನಾ ಉಪಸ್ಥಿತರಿದ್ದರು.

**ಸಂಖ್ಯೆ: 772/882**

## PRESS RELEASE ISSUED BY THE NATIONAL HUMAN RIGHTS COMMISSION ON AUGUST 3

The National Human Rights Commission (NHRC) has been holding 'Open Hearings and Camp Sittings and in different States and Union Territories of the country in order to address the grievances of people speedily as the Commission is committed to safeguard the human rights of every individual. These also provide an opportunity to take up pending cases of respective states for hearing and disposal on the spot. The aggrieved persons, NGOs etc get a platform to express the problems being faced by the people on account of omissions/commissions on part of public authorities. Another objective of these 'Open Hearings and Camp Sittings' is to sensitize the public authorities about the issues involving human rights.

2. In this series, the Commission held its two day Open Hearing and Camp Sitting at Bengaluru, Karnataka from 2nd August to 3rd August 2018.

3. Notices were published in national and local dailies of Karnataka inviting complaints for public hearing at Bengaluru on the problems and grievances of schedules castes and scheduled tribes from the persons belonging to those sects who have a complaint of atrocity committed by a public servant or of negligence by a public servant in prevention of alleged atrocity.

4. During the inauguration on 2nd August, after the welcome address by Shri Lakshminarayana, Addl. Chief Secretary, the Chief Secretary Shri T.M. Vijaybhaskar stated that the Camp Sitting was a platform for hearing and provide remedy on the spot for the grievances and assured the Commission of prompt action on the various complaints received from NHRC. The Secretary General NHRC Shri Ambuj Sharma informed the gathering that the Camp sittings/Open hearings provided an occasion to the Commission to come to grass root level and interact with people, NGOs, Human Rights defenders and Media. The Commission was also involving various stake holders through workshops/Seminars. Justice Shri H.L. Dattu, Chairperson NHRC mentioned that apart from being significant to improve governance and creating public awareness, the Camp Sittings pave the way for greater participation and relief for marginalized sections, provide an opportunity for the look at Human Rights Violation in the State, address them collectively and contribute to the implementation of Socio-economic Flagship programmes and provision of basic facilities.

5. 185 cases, including the matters already pending in the Commission, were considered by the three Benches on the First Day. Of these, 106 cases were closed since the Commission was satisfied with the action taken by the State Government for redressal of the grievances. The Commission recommended compensation of Rs Five Lakhs in one case and also issued

Show Cause Notices to the State Government in seven matters for providing monetary relief for prima-facie violation of human rights. In some cases, reports received from authorities were ordered to be sent to the complainant for their comments and, in some cases, further reports have been called for.

6. The nature of cases considered in the single benches included atrocities on SC/STs, relief according to law, water drainage in Hassan district, compensation and rehabilitation for acquisition of land for metro rail by KIADB in Bengaluru, allotment of land to scheduled castes, construction of homes for scheduled caste in Gadag. alleged suicide by a person due to police torture in Gulbarga, release of retirement benefit and rape on dalit minor girl, release and rehabilitation of bonded labours, death in main hole, electrocution death, failure by the police to take action, death of children due to vaccination in Mandya etc.

7. On the 2nd day, 11 cases were taken up by the Full Commission. These included matters pertaining to illegal quarrying in Shivamogga District and Mandya District, atrocities by a mob on a Tanzanian national women by a mob in Bengaluru, rescue of slave farmers from Mysore District, police atrocities on villagers in Belgaum district, contaminated war supply in Shivamogga district and air and water pollution caused by land filled garbage in Mysore. The Full Commission was informed that Rs 4.53 lakhs have been paid to victims of atrocity in Mandya District and Rs 1.50 lakhs paid to the victim from Bengaluru district. Further, in the case of contaminated water supply Two lakhs each have been paid to the families of the four deceased. The Commission also recommended monetary compensation of Rs 5000/- each for 35 victims who were taken ill by contaminated water. Upon consideration of

the reports, the Full Commission closed four cases and called for the further reports in the remaining cases.

8. The Full Commission meeting was followed by an interaction with the NGOs, Human Rights Defenders and LGBT community representatives. During the interaction, the civil society representatives raised sensitive issues such as victimization of barber community members, problems faced by transgender, human trafficking and bonded labour, delay in registration of cases by police. problems faced by human rights defenders including threats to their life, physical violence and sexual harassment against woman at work place even in corporate sector etc.

**ಸಂಖ್ಯೆ: 773/883**

## ಬೆಂಗಳೂರಿನಲ್ಲಿ 21 ನೇ ಐಟಿ–ಬಿಟಿ ಸಮ್ಮೇಳನ

**– 29 ನವೆಂಬರ್ ರಿಂದ 1 ಡಿಸೆಂಬರ್**

ಆಗಸ್ಟ್ 3 ಬೆಂಗಳೂರು(ಕರ್ನಾಟಕ ವಾರ್ತೆ)

21ನೇ ಐಟಿ/ಬಿಟಿ ಸಮ್ಮೇಳನವನ್ನು ಇದೇ ನವೆಂಬರ್ 29 ರಿಂದ ಡಿಸೆಂಬರ್ 1 ರ ವರೆಗೆ ಒಟ್ಟು ಮೂರು ದಿನಗಳ ಕಾಲ ನಗರದ ಅರಮನೆ ಆವರಣದಲ್ಲಿ ನಡೆಸಲಾಗುವುದು ಎಂದು ಬೃಹತ್ ಮತ್ತು ಸಣ್ಣ ಕೈಗಾರಿಕೆ, ಸಕ್ಕರೆ, ಐಟಿ, ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಾರ್ಜ್ ಅವರು ತಿಳಿಸಿದರು.

ಅವರು ಇಂದು ನಗರದ ಖಾಸಗಿ ಹೋಟೆಲ್‌ನಲ್ಲಿ ಏರ್ಪಡಿಸಿದ್ದ **ಬೆಂಗಳೂರು ಟೆಕ್ ಸಮಿತ್** ನಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಬೆಂಗಳೂರಿನಲ್ಲಿ ನಡೆಯುವ ಅಂತರಾಷ್ಟ್ರೀಯ ಮಟ್ಟದ ಈ ಸಮ್ಮೇಳನಕ್ಕೆ ದೇಶ ವಿದೇಶಗಳಿಂದ ಅನೇಕ ಉದ್ಯಮಿಗಳು ಹಾಗೂ ಸಂಸ್ಥೆಗಳು ಭಾಗವಹಿಸಲು ಆಸಕ್ತಿ ಹೊಂದಿದ್ದು, ಅದರಲ್ಲು ಯುವ ಜನತೆ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಅದಕ್ಕಾಗಿ ಸರ್ಕಾರದ ಮಟ್ಟದಲ್ಲಿ ಒಂದು ವಿಶೇಷವಾಗಿ ಕಚೇರಿಯೊಂದನ್ನು ಸ್ಥಾಪಿಸಿ, ಆ ಮೂಲಕ ಸಮ್ಮೇಳನದಲ್ಲಿ ಭಾಗವಹಿಸುವವರಿಗೆ ಯಾವುದೇ ಸಮಸ್ಯೆಗಳಾಗದಂತೆ ನೋಡಿಕೊಳ್ಳಲು ಕ್ರಮವಹಿಸಲಾಗುವುದು ಎಂದು ವಿವರಿಸಿದರು.

ತಾವು ಇತ್ತೀಚೆಗಷ್ಟೆ ಖಾತೆ ವಹಿಸಿಕೊಂಡಿದ್ದು, ಅದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲಾಗುತ್ತಿದೆ. ರಾಜ್ಯದಲ್ಲಿ ಹೊಸ ಉದ್ಯಮಗಳ ಪ್ರಾರಂಭಕ್ಕೆ ಬೇಕಾಗುವ ಎಲ್ಲಾ ರೀತಿಯ ಮೂಲಸೌಲಭ್ಯ ಹಾಗೂ ಸ್ಥಳಾವಕಾಶ ಕಲ್ಪಿಸಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ. ಉದ್ಯಮಗಳನ್ನು ಪ್ರಾರಂಭಿಸಲು ಬೆಂಗಳೂರನ್ನೇ ಪ್ರಮುಖವಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಆದರೆ ರಾಜ್ಯದ ಇತರ ಜಿಲ್ಲೆಗಳಾದ ಹುಬ್ಬಳ್ಳಿ, ಬೆಳ್ಳಾರಿ, ಚಿಕ್ಕಮಗಳೂರು, ಹಾಸನ ಚಾಮರಾಜನಗರ ಹೀಗೆ ಎಲ್ಲಾ ಸ್ಥಳಗಳಲ್ಲೂ ಹೊಸ ಉದ್ಯಮ ಪ್ರಾರಂಭಿಸಲು ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೆ ಅದಕ್ಕೇ ಬೇಕಾದ ಸಂಪರ್ಕ, ಮೂಲಭೂತ ಸೌಲಭ್ಯ ಮತ್ತು ಸ್ಥಳಾವಕಾಶ ಹೀಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಬೆಂಗಳೂರು ಚೆನ್ನೈ ಕಾರಿಡಾರ್ ಗೆ ಈಗಾಗಲೇ 10 ಸಾವಿರ ಎಕರೆ ಜಾಗ ಗುರುತಿಸಿದ್ದು, 6000 ಎಕ್ಕರೆ ವಶಕ್ಕೆ ಪಡೆಯಲಾಗಿದೆ. ಇದಕ್ಕಾಗಿ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ನೀಡುತ್ತದೆ. ಅಲ್ಲದೆ ಜಪಾನ್ ದೇಶ ಹೂಡಿಕೆಗೆ ಹೆಚ್ಚಿನ ಆಸಕ್ತಿಯಿಂದ ಮುಂದೆ ಬಂದಿದ್ದು. ಇತರ ಹಲವಾರು ದೇಶಗಳಿಂದ ಹೂಡಿಕೆಗೆ ಆಸಕ್ತಿ ತೋರಿದ್ದಾರೆ. ಬೋಯಿಂಗ್, ಆಪಲ್, ಏಷ್ಯ ಪೇಯಿಂಟ್ ಸಂಸ್ಥೆಗಳು 2500 ಕೋಟಿ ರೂ. ಗಳ ಬಂಡವಾಳ ಹೂಡುವ ಮೂಲಕ ಉದ್ಯಮ ಪ್ರಾರಂಭಿದಲು ಆಸಕ್ತಿ ತೋರಿವೆ ಎಂದರು.

ವಾಣಿಜ್ಯ ಮತ್ತು ಕೈಗಾರಿಕೆ, ಐಟಿ ಬಿಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಗೌರವ್ ಗುಪ್ತಾ ಅವರು ಸ್ವಾಗತ ಕೋರಿದರು. ಇನ್ಫೋಸಿಸ್ ಸಹಸ್ಥಾಪಕ, ಕಾರ್ಯನಿರ್ವಾಹಕ ಉಪಾಧ್ಯಕ್ಷರು ಆದ ಕ್ರಿಷ್ ಗೋಪಾಕ್ರಿಷ್ಣನ್ ಅವರು ಪ್ರಾಸ್ಥಾವಿಕ ಭಾಷಣ ಮಾಡಿದರು.

<u>ಮಳೆಗಾಲದ ಪ್ರವಾಸ</u>

## <u>ಜಲಪಾತಗಳಲ್ಲಿ ಜಲಪಾತೋತ್ಸವ ಕಾರ್ಯಕ್ರಮ</u>

ಬೆಂಗಳೂರು, ಆಗಸ್ಟ 3 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆವತಿಯಿಂದ ಮಳೆಗಾಲದ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಸಲುವಾಗಿ ಕಾವೇರಿ ನದಿಯ 3 ಜಲಪಾತಗಳಲ್ಲಿ ಜಲಪಾತೋತ್ಸವಗಳನ್ನು ಆಯೋಜಿಸಲಾಗುವುದು ಎಂದು ಪ್ರವಸೋದ್ಯಮ ಮತ್ತು ರೇಷ್ಮೆ ಸಚಿವ ಸಾ.ರಾ.ಮಹೇಶ್ ಅವರು ತಿಳಿಸಿದ್ದಾರೆ.

ಕಾವೇರಿ ನದಿಯ ಅದ್ಭುತ ಸೃಷ್ಟಿಗಳಾದ ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಚುಂಚನಕಟ್ಟೆ ಜಲಪಾತೋತ್ಸವವನ್ನು ಆಗಸ್ಟ್ 11 ಮತ್ತು 12 ರಂದು, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಭರಚುಕ್ಕಿ ಜಲಪಾತೋತ್ಸವವನ್ನ ಆಗಸ್ಟ್ 18 ಮತ್ತು 19 ರಂದು ಹಾಗೂ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಗಗನಚುಕ್ಕಿ ಜಲಪಾತೋತ್ಸವವನ್ನು

ಆಗಸ್ಟ್ 25 ಹಾಗೂ 26 ರಂದು ಆಯೋಜಿಸಲಾಗುತ್ತಿದೆ. ಈ ಮೂರು ಉತ್ಸವಗಳಿಗೂ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗಳು ಬರುವ ನಿರೀಕ್ಷೆಯಿದೆ.

ಈ ಉತ್ಸವಗಳಿಗೆ ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರು ಚಾಲನೆ ನೀಡಲಿದ್ದು, ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಪಾಲ್ಗೊಳ್ಳುವರು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 774/884**

# ಪ್ರಾಧಿಕಾರದ ಹೆಸರು ಹೇಳಿ ಅಣುಕು ಪ್ರದರ್ಶನ – ಎಚ್ಚರವಹಿಸುವಂತೆ ಶಿಕ್ಷಣ ಸಂಸ್ಥೆಗಳಿಗೆ ಸೂಚನೆ

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವಾಗಲಿ ಅಥವಾ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವಾಗಲಿ ಯಾವುದೇ ಖಾಸಗಿ ವ್ಯಕ್ತಿಗಳಿಗೆ ಅಣಕು ಪ್ರದರ್ಶನವನ್ನು ಏರ್ಪಡಿಸಲು ಅನುಮತಿಯನ್ನು ನೀಡಿರುವುದಿಲ್ಲ ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಗಂಗಾರಾಮ್ ಬಡೇರಿಯಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಖಾಸಗಿ ವ್ಯಕ್ತಿಗಳು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಹೆಸರನ್ನು ಬಳಸಿ ನಾವು ಅವರ ಪ್ರತಿನಿಧಿಗಳೆಂದು ಸುಳ್ಳು ಹೇಳಿ ಶಾಲಾ-ಕಾಲೇಜುಗಳಲ್ಲಿ, ಕೈಗಾರಿಕೆಗಳಲ್ಲಿ ವಿಪತ್ತು ನಿರ್ವಹಣೆಯ ಅಣುಕು ಪ್ರದರ್ಶನವನ್ನು ಮಾಡಲು ಬಂದಿರುವುದಾಗಿ ಸದರಿ ಸಂಸ್ಥೆಯ ಮುಖ್ಯಸ್ಥರುಗಳಿಗೆ ತಿಳಿಸಿ ಅಣಕು ಪ್ರದರ್ಶನ ನೋಂದಣಿ ಶುಲ್ಕವೆಂದು ಹಣವನ್ನು ಸಂಗ್ರಹಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ಈ ಸಂಬಂಧ ತಮಿಳುನಾಡು ರಾಜ್ಯದ ಕೊಯಮುತ್ತೂರು ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿ ನಾನು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ತರಬೇತಿ ಅಧಿಕಾರಿ ಎಂಬ ಸೋಗಿನಲ್ಲಿ ಬಂದು ಕಾಲೇಜಿನಲ್ಲಿ ಅಣಕು ಪ್ರದರ್ಶನವನ್ನು ಏರ್ಪಡಿಸುತ್ತಿರುವ ಸಂದರ್ಭದಲ್ಲಿ ಒಂದು ಅವಘಡ ಸಂಭವಿಸಿದ ಪರಿಣಾಮ ಸಾವು ಸಂಭವಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಾಂಕ: 20-07-2018 ರಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ರಾಜ್ಯ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಇಂತಹ ಸುಳ್ಳು ಖಾಸಗಿ ಪ್ರತಿನಿಧಿಗಳು ಅಣಕು ಪ್ರದರ್ಶನವನ್ನು ಏರ್ಪಡಿಸಲು ರಾಜ್ಯದ ಶಾಲಾ-ಕಾಲೇಜುಗಳು ಹಾಗೂ ಕಾರ್ಖಾನೆಗಳ ಮುಖ್ಯಸ್ಥರುಗಳಿಗೆ ತಿಳಿಸುವುದೇನೆಂದರೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವಾಗಲಿ ಅಥವಾ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವಾಗಲಿ ಯಾವುದೇ ಖಾಸಗಿ ವ್ಯಕ್ತಿಗಳಿಗೆ ಅಣಕು ಪ್ರದರ್ಶನವನ್ನು ಏರ್ಪಡಿಸಲು ಅನುಮತಿಯನ್ನು ನೀಡಿರುವುದಿಲ್ಲ.

ಆದುದರಿಂದ ಇಂತಹ ವಿಷಯಗಳಲ್ಲಿ ವಿಪತ್ತು ನಿರ್ವಹಣೆಯ ಅಣಕು ಪ್ರದರ್ಶನವನ್ನು ಏರ್ಪಡಿಸುವ ಸಂದರ್ಭದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳ ಅನುಮತಿಯನ್ನು ಪಡೆದು ಸದರಿ ಅಣಕು ಪ್ರದಶ್ನಗಳನ್ನು ನುರಿತ ತರಬೇತಿ ಅಧಿಕಾರಿಗಳ ನೇತೃತ್ವದಲ್ಲಿ ಏರ್ಪಡಿಸಬೇಕೆಂದು ಸಂಬಂಧಪಟ್ಟವರಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಸೂಚನೆ ನೀಡಿರುತ್ತಾರೆ.

ಎಸಿಬಿ ದಾಳಿ

ಬೆಂಗಳೂರು, ಆಗಸ್ಟ್ 3 (ಕರ್ನಾಟಕ ವಾರ್ತೆ)

ಬೀದರ ಜಿಲ್ಲೆ, ಬಸವಕಲ್ಯಾಣ ಪಟ್ಟಣದ ನಿವಾಸಿಯೊಬ್ಬರು ಬಸವಕಲ್ಯಾಣ ನಗರದಲ್ಲಿ ಮನೆ ಕಟ್ಟಲು ಕಟ್ಟಡ ಪರವಾನಿಗೆ ಪತ್ರ ಪಡೆಯಲು ದಿನಾಂಕ 16.04.2018 ರಂದು ಬಸವಕಲ್ಯಾಣ ನಗರಸಭೆ ಕಛೇರಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ ದಿಗಂಬರ, ಎಸ್.ಡಿ.ಎ, ನಗರಸಭೆ ಕಛೇರಿ, ಬಸವಕಲ್ಯಾಣ ರವರು ಅರ್ಜಿದಾರರ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ಪತ್ರ ನೀಡಲು ರೂ 10,000/- ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:03.08.2018 ರಂದು ಶ್ರೀ ದಿಗಂಬರ, ಎಸ್.ಡಿ.ಎ, ನಗರಸಭೆ ಕಛೇರಿ, ಬಸವಕಲ್ಯಾಣ ರವರು ಫಿರ್ಯಾದುದಾರರಿಂದ ರೂ.5,000/- ಲಂಚದ ಹಣ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಬೀದರ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಆರೋಪಿತರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ.

## ACB Raid

A resident of Basavakalyan Town, Bidar District had applied for Building Construction Permission at City Muncipal Corporation, Basavakalyan On 16.04.2018.

Sri. Digamber, S.D.A, CMC, Basavakalyan has demanded bribe amount Rs.10,000/- to do the same.

On 03.08.2018 the officials of ACB Bidar have trapped & arrested Sri .Digamber, S.D.A, CMC, Basavakalyan while accepting bribe amount of Rs.5,000/- from the complainant. The bribe amount has been seized. The case is under Investigation.